ಟೀವಿ ಪರದೆಯ ಮೇಲೆ ಈಗಾಗಲೇ ಹಳತಾದ ಯಾವುದೋ ಫೀಲ್ ಗುಡ್ ವಿಷಯದ ಬಗ್ಗೆ ದೊಡ್ಡದಾಗಿ ಚರ್ಚೆ ಮಾಡುತ್ತಿದ್ದೇವೆ ಎಂದು ತೋರಿಸಿಕೊಳ್ಳುತ್ತ ವಟವಟ ಅನ್ನುತ್ತಿದ್ದ ಕೆಲವು ಮಾತಿನ ಮಲ್ಲರನ್ನು ನೋಡಿ ಬೇಸತ್ತ ವಿದ್ಯಾ 'ಇದನ್ನೆಲ್ಲ ನೀನೆ ನೋಡು' ಎಂದು ಶುಭಂಕರನಿಗೆ ಹೇಳಿ ಒಳಗೆ ಹೋದವಳು ರಾತ್ರಿಯ ಅಡುಗೆ ಬಿಸಿ ಮಾಡಲು ಇನ್ನೇನು ಒಲೆಯ ಮೇಲಿಡಬೇಕು ಅನ್ನುವಷ್ಟರಲ್ಲಿ ನ್ಯೂಸ್ ಚಾನಲ್‌ನಲ್ಲಿ ಕೆಳಗೆ ತೋರಿಸುತ್ತಿದ್ದ ಫ್ಲಾಶ್ ನ್ಯೂಸ್ ಒಂದನ್ನು ನೋಡಿ ಶುಭಂಕರ್ 'ವಿದ್ಯಾ' ಎಂದು ಕೂಗಿದ. ಹೆದರಿ ಓಡೋಡಿ ಬಂದ ವಿದ್ಯಾ ಗರಬಡಿದವನಂತೆ ಕೂತ ಶುಭಂಕರನನ್ನು ನೋಡಿ ಹೆದರಿದಳು. 'ಸುಪ್ರಸಿದ್ಧ ಗಾಯಕಿ ಮೀತಾ ಲೋಲಗೆಕರ್ ಅವರ ಕಾರಿಗೆ ಅಪಘಾತ' ಎಂದು ಟೀವಿ ಪರದೆಯ ಮೇಲೊಂದು ಬ್ರೇಕಿಂಗ್ ನ್ಯೂಸ್ ಬರುತ್ತಿತ್ತು,

ಆ ದಿನ ಪ್ರತಿಯೊಂದು ಚಾನಲ್‌ನಲ್ಲೂ ಇದೇ ಸುದ್ದಿ. 'ಪುಣೆ ಮುಂಬಯಿ ಹೆದ್ದಾರಿಯಲ್ಲಿ ವೇಗವಾಗಿ ಹೋಗುತ್ತಿದ್ದ ಮೀತಾ ಲೋಲಗೆಕರ್ ಅವರ ಲ್ಯಾನ್ಸರ್ ಕಾರಿಗೆ ಟ್ರಕ್ ಒಂದು ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ ಕಾರು ನುಚ್ಚುನೂರಾಗಿದೆ. ಅವರ ಕಾರಿನ ಚಾಲಕ ಹಾಗೂ ಸಹಾಯಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಕಿಯ ಕಾರ್ಯದರ್ಶಿ ಹಿಂದಿನಿಂದ ಬರುತ್ತಿದ್ದ ಕಾರನ್ನು ನಿಲ್ಲಿಸಿ ಸಹಾಯ ಕೋರಿದಾಗ ಅಪಘಾತಕ್ಕೀಡಾದ ಕಾರು ಮೀತಾ ಅವರದ್ದು ಎಂದು ಗೊತ್ತಾಗಿದೆ. ಬಳಿಕ ಎರಡು ಮೂರು ಕಾರುಗಳು ಸಹಾಯಕ್ಕಾಗಿ ನಿಂತು, ಅದರಲ್ಲಿ ಒಬ್ಬನ ಹತ್ತಿರವಿದ್ದ ಲ್ಯಾಪ್‌ಟಾಪ್‌ನ ಸಹಾಯದಿಂದ ತರಿಸಿದ ಆಂಬುಲೆನ್ಸ್‌ನಲ್ಲಿ ಆಕೆಯನ್ನು ವಾಕಡ್‌ನಲ್ಲಿಯ 'ಸ್ಲೋನ್' ಆಸ್ಪತ್ರೆಗೆ ಸೇರಿಸಲಾಗಿದೆ. ಆಕೆಯ ಕಾರ್ಯದರ್ಶಿ ಪ್ರಜ್ಞೆ ತಪ್ಪಿದ್ದಾನೆ.'

'ಮೀತಾರ ತಲೆಗೆ ತೀವ್ರ ಪೆಟ್ಟಾಗಿದ್ದು ಆಕೆ ಕೋಮಾದಲ್ಲಿದ್ದಾರೆ. ಅವರ ಅಭಿಮಾನಿಗಳು ಆಸ್ಪತ್ರೆಗೆ ಬಂದು ಗದ್ದಲ ಮಾಡಬಾರದು. ಆಕೆಗೆ ಶುಭ ಕೋರುವವರು, ಪ್ರಾರ್ಥಿಸುವವರು 'ಆಜ ದಿನಾಂಕ್'ನವರು ಕೆಳಗೆ ಕೊಟ್ಟಿರುವ ಸಂಖ್ಯೆಗೆ ಎಸ್.ಎಮ್.ಎಸ್ ಮಾಡಬಹುದು. ಅಲ್ಲಿಯ ವೈದ್ಯರು ಆಗಾಗ ಆಕೆಯ ಆರೋಗ್ಯದ ಬಗ್ಗೆ ಮಾಹಿತಿ ನೀಡಲಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಪೊಲೀಸರು ತಕ್ಷಣ ಹಾಜರಾಗಿ ಆಸ್ಪತ್ರೆಗೆ ರಕ್ಷಣೆ ಒದಗಿಸಿದ್ದಾರೆ.'